ಮೈಸೂರು ಅಭಿವೃದ್ಧಿ ಪ್ರಾಧಿಕಾರ ರಚನೆ ಬಗ್ಗೆ

೨೩೦೮. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿ ಅಧಿಸೂಚನೆ ಹೊರಡಿಸಿದ್ದು ಪುನಃ ಹಿಂದಕ್ಕೆ ಪಡೆದದ್ದು ನಿಜವೇ ಹಾಗಿದ್ದಲ್ಲಿ ಹಿಂದಕ್ಕೆ ಪಡೆಯಲು ಕಾರಣಗಳೇನು ?

ಆ) ಪ್ರಾಧಿಕಾರ ರಚನೆ ಆಜ್ಞೆಯನ್ನು ಯಾವಾಗ ಜಾರಿಗೆ ಕೊಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ ಉದ್ಭವಿಸುವುದಿಲ್ಲ

ಆ) ದಿನಾಂಕ ೧೬-೫-೧೯೮೮ ರಿಂದಲೇ ಜಾರಿಗೊಳಿಸಲಾಗಿದೆ.

ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಯಿಂದ ಹಂಚಿರುವ ನಿವೇಶನಗಳ ಕುರಿತು

೨೩೯೯. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನಕೋಟೆ).—ಮಾನ್ಯ ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿಸಿ ಉತ್ತರಿಸುವರೇ ?

ಅ) ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಯುವರು ಆಶಾ ಮಂದಿರ ಯೋಜನೆಯನ್ವಯ ಇದುವರೆಗೆ ನೀಡಲಾಗಿರುವ ಮನೆಗಳು ಮತ್ತು ನಿವೇಶನಗಳೆಷ್ಟು ?

ಆ) ಆ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ನೀಡಲಾಗಿರುವುದೆಷ್ಟು ?

ಇ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಮಾತ್ರ ನಿವೇಶನ ನೀಡಲು ಇತ್ತೀಚೆಗೆ ಪ್ರಕಟಿಸಿದ್ದು ನಿಜವೇ. ಹಾಗಿದ್ದಲ್ಲಿ ಮನೆಗಳ ಮತ್ತು ನಿವೇಶನಗಳ ಸಂಖ್ಯೆ ಎಷ್ಟು (ಪ್ರಕಟಿಸಿದ ಸ್ಥಳದ ವಿವರ ನೀಡುವುದು).

ಈ) ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ನಿವೇಶನ ಮಂಜೂರಾದ ಮೇಲೆ ಪೂರ್ಣ ಹಣ ಕಟ್ಟಲು ಮಿತಿಗೊಳಿಸಿರುವ ಸಮಯ ಎಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಆಶಾ ಮಂದಿರ ಯೋಜನೆಯಡಿಯಲ್ಲಿ ೯,೮೬೩ ನಿವೇಶನಗಳನ್ನು ಮತ್ತು ೨೦೭ ಮನೆಗಳನ್ನು ವಿತರಣೆ ಮಾಡಲಾಗಿದೆ ವಿವರಗಳನ್ನು ಲಗತ್ತಿಸಲಾಗಿದೆ.

ಆ) ೬೪೪ ನಿವೇಶನಗಳನ್ನು ಮತ್ತು ೧೩ ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮಂಜೂರು ಮಾಡಲಾಗಿದೆ.

ಇ) ಹೌದು ೯೫೩ ನಿವೇಶನಗಳನ್ನು ಹಂಚಲು ಪ್ರಕಟಣೆ ಹೊರಡಿಸಿದೆ. ಪ್ರಕಟಣೆಯಲ್ಲಿ ಹಾಲಿ ಲಭ್ಯವಿರುವ ಯಾವುದೇ ಬಡಾವಣೆಗಳಲ್ಲಿ ನಿವೇಶನಗಳನ್ನು ಮಂಜೂರು ಮಾಡಲಾಗುವುದು ಎಂದು ತಿಳಿಸಲಾಗಿದೆ. ಬಡಾವಣೆಗಳ ವಿವರವನ್ನು ಪ್ರಕಟಣೆಯಲ್ಲಿ ತಿಳಿಸಿಲ್ಲ, ಆದರೆ ಮನೆಗಳ ಹಂಚಿಕೆಗೆ ಪ್ರಕಟಣೆ ಹೊರಡಿಸಿರುವುದಿಲ್ಲ.

ಈ) ನಿವೇಶನದ ಪೂರ್ಣ ಹಣವನ್ನು ೩೦ ದಿವಸಗಳಲ್ಲಿ ಪಾವತಿ ಮಾಡಲು ಕಾಲಾವಕಾಶ ಕೊಟ್ಟಿರುತ್ತೆ.